**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ತೇಜಸ್ವಿನಿಗೌಡ ಇವರು ನಿಯಮ – 330ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ವಿಷಯ:** ಬೆಂಗಳೂರಿನ 'ಸೆಂಚುರಿ ಕ್ಲಬ್'ನ್ನು 'Park zone' (ಉದ್ಯಾನವಲಯ) ನಿಂದ ಕೈಬಿಡಲು ಕೋರಿ, ಸುತ್ತಮುತ್ತಲ ಸರ್ಕಾರಿ ಕಟ್ಟಡಗಳನ್ನು Park Zone ನಿಂದ ಕೈಬಿಟ್ಟು, ಸೆಂಚುರಿ ಕ್ಲಬ್ ನ್ನು ಕೈಬಿಡದಿರುವುದರಿಂದ ಭಾರತರತ್ನ ವಿಶ್ವೇಶ್ವರಯ್ಯ ನವರು ಹಾಗೂ ಮೈಸೂರು ಮಹಾರಾಜರಿಂದ ಆರಂಭವಾದ ಈ ಐತಿಹಾಸಿಕ ಕ್ಲಬ್ ನ ಅಭಿವೃದ್ಧಿ ಹಾಗೂ ಬೆಳವಣಿಗೆಗಳಿಗೆ ತೊಡಕು ಹಾಗೂ ಈ ಕ್ಲಬ್ ನ ಸದಸ್ಯರಿಗೆ ಸಿಗಬೇಕಾದ ಉತ್ತಮ ಸವಲತ್ತುಗಳಿಗೆ ವಂಚನೆಯಾಗಿರುವ ಕುರಿತು

**ಉತ್ತರ:** ಕಬ್ಬನ್ ಉದ್ಯಾನವು ಒಟ್ಟು 197.00 ಎಕರೆ 31.50 ಗುಂಟೆಗಳ ವಿಸ್ತೀರ್ಣದ ಪ್ರದೇಶವನ್ನುಹೊಂದಿರುತ್ತದೆ. ಕಬ್ಬನ್ ಉದ್ಯಾನವನವು ಐತಿಹಾಸಿಕ ಉದ್ಯಾನವನವಾಗಿದ್ದು ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿ ಇದ್ದು, ರಾಜ್ಯದ ಪ್ರಮುಖ ಆಡಳಿತ ಪ್ರದೇಶಕ್ಕೆ ಒಳಪಟ್ಟಿರುತ್ತದೆ. ಕಬ್ಬನ್ ಉದ್ಯಾನವನದಲ್ಲಿ ಹಲವಾರು ದೇಶಿ ಹಾಗೂ ವಿದೇಶಿ ಉತ್ತಮ ಸಸ್ಯತಳಿಗಳು, ಸುಮಾರು 195 ಸಸ್ಯ ಪ್ರಬೇಧಗಳು , ಒಟ್ಟು 8837 ರಷ್ಟುಆಕರ್ಷಕ ಗಿಡಮರಗಳನ್ನು ಕಾಣಬಹುದು.

ಸರ್ಕಾರಿ ಆದೇಶ ಸಂಖ್ಯೆ: G.3200-9/O.M.314-11-4 (E-1) Bangalore, Dated 27th October 1913 ರಂತೆ ಮೈಸೂರು ಮಹಾರಾಜರಿಂದ Cosmopolitan club ನಿರ್ಮಾಣಕ್ಕೆ ಉಚಿತವಾಗಿ ಜಮೀನು ಹಸ್ತಾಂತರವಾಗಿದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:HCD 515 HGM 2014 ಬೆಂಗಳೂರು ದಿನಾಂಕ:05-11-2015 ರಂತೆ ಕಬ್ಬನ್ ಉದ್ಯಾನವನದ ಸರಹದ್ದನ್ನು ಗುರುತಿಸಲಾಗಿದ್ದು, ಅದರಂತೆ ಸೆಂಚುರಿ ಕ್ಲಬ್ ಕಬ್ಬನ್ ಉದ್ಯಾನವನದ ವ್ಯಾಪ್ತಿಯಲ್ಲಿ ಇರುತ್ತದೆ ಹಾಗೂ ಸೆಂಚುರಿ ಕ್ಲಬ್ ಪ್ರಸ್ತುತ 4 ಎಕರೆ 37 ಗುಂಟೆಗಳ ವಿಸ್ತೀರ್ಣ ಹೊಂದಿರುತ್ತದೆ. ಸೆಂಚುರಿ ಕ್ಲಬ್‌ಗೆ ಸೇರಿದ ಜಾಗವು Grant ಆಗಿರುವುದರಿಂದ ಕಬ್ಬನ್ ಉದ್ಯಾನವನದಲ್ಲಿ ಇರುವ ಸೆಂಚುರಿಕ್ಲಬ್‌ಗೆ ಸಂಬಂಧಿಸಿದ ಯಾವುದೇ ಕಾರ್ಯವೈಖರಿ ಮತ್ತು ಚಟುವಟಿಕೆಗಳಿಗೆ ಅಡಚಣೆ ಉಂಟಾಗುತ್ತಿಲ್ಲ.

ಪ್ರಸ್ತುತ ಸೆಂಚುರಿ ಕ್ಲಬ್‌ಗೆ ಮೀನುಗಾರಿಕೆ ಇಲಾಖೆಯ ಮತ್ಸ್ಯದರ್ಶಿನಿ ಮುಂಭಾಗ ಪ್ರಮುಖ ಪ್ರವೇಶದ್ವಾರವಿದ್ದು, ಸೆಂಚುರಿ ಕ್ಲಬ್‌ನ ಸದಸ್ಯರುಗಳು ಬಳಸುತ್ತಿರುತ್ತಾರೆ. ಸೆಂಚುರಿ ಕ್ಲಬ್‌ಗೆ ಪ್ರವೇಶ ಕಲ್ಪಿಸುವ ಮತ್ತೊಂದು ಪ್ರವೇಶದ್ವಾರವು ಕಬ್ಬನ್ ಉದ್ಯಾನವನ ವ್ಯಾಪ್ತಿಯ ಕೇಂದ್ರ ಗ್ರಂಥಾಲಯದ ಬಳಿಯಲ್ಲಿರುತ್ತದೆ. ಸೆಂಚುರಿ ಕ್ಲಬ್ ನ್ನು ಕಬ್ಬನ್ ಉದ್ಯಾನವನ ವ್ಯಾಪ್ತಿಯಿಂದ ಹೊರಗಿಟ್ಟಲ್ಲಿ, ಈ ಪ್ರವೇಶ ದ್ವಾರದ ಜಾಗವು ಕಬ್ಬನ್ ಉದ್ಯಾನವನ ವ್ಯಾಪ್ತಿಗೆ ಒಳಪಡುವುದರಿಂದ ಕೇಂದ್ರ ಗ್ರಂಥಾಲಯಕ್ಕೆ ಹೊಂದಿಕೊಂಡಂತಿರುವ ಪ್ರವೇಶದ್ವಾರವನ್ನು ಶಾಶ್ವತವಾಗಿ ಮುಚ್ಚಬೇಕಾಗುತ್ತದೆ. ಈ ಪ್ರವೇಶದ್ವಾರ ಸೆಂಚುರಿ ಕ್ಲಬ್‌ನ ಸದಸ್ಯರುಗಳು ಬಳಸುವ ಸಂಬಂಧ ಹಾಲಿ ಘನ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ W.P. No. 1024/2021 ರಂತೆ ಸಾರ್ವಜನಿಕ

SL No 71
17/07/23

ಹಿತಾಸಕ್ತಿ ಅರ್ಜಿಯು ದಾಖಲಾಗಿದ್ದು, ಈ ಬಗ್ಗೆ ಮಧ್ಯಂತರ ಆದೇಶವಾಗಿದ್ದು, ಈ ಅನ್ವಯ ಸದರಿ ಪ್ರವೇಶದ್ವಾರ ಮತ್ತು ರಸ್ತೆಯನ್ನು ಸೆಂಚುರಿ ಕ್ಲಬ್ ಬಳಸುತ್ತಿದೆ. ಈ ಸಂಬಂಧ ವಿಚಾರಣೆಯು ಘನ ಉಚ್ಚನ್ಯಾಯಾಲಯದಲ್ಲಿ ಅಂತಿಮ ಆದೇಶಕ್ಕಾಗಿ ಬಾಕಿಯಲ್ಲಿರುತ್ತದೆ.

**HORTI 265 HGM 2023**

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು